## 2017 ಕ.ತೀ.ವ 138

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇ ಗೌಡ

### ಅಲುವೇಲಮ್ಮ ಮೃತರಾಗಿರುವುದರಿಂದ ಅವರ ಕಾನೂನು ಸಮ್ಮತ ವಾರಸುದಾರರು –ವಿರುದ್ಧ– ಆರ್. ನಜೀರ್ ಅಹ್ಮದ್ ಮತ್ತು ಇನ್ನೊಬ್ಬರು*

ಮೋಟಾರು ವಾಹನ ಅಧಿನಿಯಮ, 1988ರ 166 ನೇ ಪ್ರಕರಣದ ಮೇರೆಗೆ ಅರ್ಜಿ.

ರಸ್ತೆ ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಪತ್ನಿಯಿಂದ ಪರಿಹಾರಕ್ಕಾಗಿ ಕ್ಲೇಮು ಅರ್ಜಿ. ಅರ್ಜಿಯು ಇತ್ಯರ್ಥದಲ್ಲಿರುವಾಗ ಅರ್ಜಿದಾರಳು ಮರಣ ಹೊಂದುತ್ತಾಳೆ. ಆಕೆ ಮತ್ತು ಮೃತನ ಮೂವರು ವಯಸ್ಕ ಮಕ್ಕಳಿಂದ ಅರ್ಜಿಯ ಮುಂದುವರಿಕೆ ಹಾಗೂ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ ನೀಡಿದ ತೀರ್ಪು ಮತ್ತು ಐತೀರ್ಪಿನ ವಿರುದ್ಧ ಮೊದಲ ಸಂಕೀರ್ಣ ಅಪೀಲು.

ಪ್ರಕರಣದ ಸನ್ನಿವೇಶಗಳು ಹಾಗೂ ವಾಸ್ತವಾಂಶಗಳನ್ನು ಪರಿಗಣಿಸಿ ಮೃತ ವ್ಯಕ್ತಿಯು ತನ್ನ ಮೂವರು ಮಕ್ಕಳು ಹಾಗೂ ಅವರ ಕುಟುಂಬದೊಂದಿಗೆ ವಾಸಿಸುತ್ತಿರುವಾಗ ಅವರಿಗೆ ಏನನ್ನು ನೀಡದೆ ತಾನೇ ಎಲ್ಲ ಗಳಿಕೆಯನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ ಹಾಗೂ ವಯಸ್ಕ ಮಕ್ಕಳು ಕೇವಲ ತಂದೆಯ ದುಡಿಮೆಯ ಮೇಲೆ ಅವಲಂಬಿತವಾಗಿರುವುದಿಲ್ಲವೆಂಬುದನ್ನು ಗಮನಿಸಿ, ಮೃತನ ವಯಸ್ಸು ಹಾಗೂ ಆದಾಯವನ್ನು ಪರಿಗಣನೆಗೆ ತೆಗೆದುಕೊಂಡು, ಪರಿಹಾರವನ್ನು ಹೆಚ್ಚಿಸುವ ಮೂಲಕ ಪ್ರಸ್ತುತ ಸಂಕೀರ್ಣ ಮೊದಲ ಅಪೀಲನ್ನು ಭಾಗಶಃ ಪುರಸ್ಕರಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆ* | *ಪ್ಯಾರಾದಲ್ಲಿ* |
|---|---|
| *1. 2009 ಎಸಿಜೆ 1441<br>ರಾಷ್ಟ್ರೀಯ ವಿಮಾ ಕಂಪನಿ ಲಿಮಿಟೆಡ್ –ವಿರುದ್ಧ–<br>ಮೇಘಜಿ ನಾರನ್ ಸಾರೊತ್ತಿಯಾ ಮತ್ತು ಇತರರು* | *(ಉಲ್ಲೇ) 9* |

*ಎಂ.ಎಫ್.ಎ. ಸಂಖ್ಯೆ: 190/2010 (ಎಂವಿ), ದಿನಾಂಕ: 18ನೇ ಜನವರಿ, 2016.

ಅರ್ಜಿದಾರರ ಪರ: ಶ್ರೀಮತಿ ಸುಗುಣ ಆರ್. ರೆಡ್ಡಿ, ವಕೀಲರು.
2ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಹರಿಣಿ ಶಿವಾನಂದ, ವಕೀಲರು.
1ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇ ಗೌಡ:**

ನ್ಯಾಯಾಧಿಕರಣವು ಐತೀರ್ಪು ನೀಡಿರುವ ಪರಿಹಾರವನ್ನು ಹೆಚ್ಚಿಸಲು ಕೋರಿ ಕ್ಲೇಮುದಾರರು ಈ ಅಪೀಲನ್ನು ಸಲ್ಲಿಸಿರುತ್ತಾರೆ.

2. ಶ್ರೀ ಬಿ. ನರಸಿಂಹಪ್ಪ, ರಸ್ತೆ ಅಪಘಾತದಲ್ಲಿ ಮೃತರಾಗಿರುತ್ತಾರೆ. ಈತನ ಪತ್ನಿ ಅಪಘಾತಕ್ಕೆ ಕಾರಣವಾಗಿರುವ ವಾಹನದ ಮಾಲೀಕ ಮತ್ತು ವಿಮಾದಾರರಿಂದ ಪರಿಹಾರವನ್ನು ಕೋರಿ, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಚಿಕ್ಕಬಳ್ಳಾಪುರ ಇವರ ಎದುರು ಮೋಟಾರು ವಾಹನ ಅಧಿನಿಯಮದ 166 ನೇ ಪ್ರಕರಣದಡಿಯಲ್ಲಿ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾಳೆ. ಈಕೆಯು ಸಹ ಕ್ಲೇಮು ಅರ್ಜಿಯು ಇತ್ಯರ್ಥದಲ್ಲಿರುವಾಗಲೇ ಮೃತಳಾಗಿರುತ್ತಾಳೆ. ಹಾಗಾಗಿ, ಮೂಲ ಕ್ಲೇಮುದಾರಳಾದ ಅಲುವೇಲಮ್ಮ ಮೃತ ಬಿ.ವಿ.ನರಸಿಂಹಪ್ಪ ನವರುಗಳ ಕಾನೂನು ಸಮ್ಮತ ವಾರಸುದಾರರೆಂದೂ, ದಾಖಲೆಗಳಲ್ಲಿ ಕಂಡುಬಂದ ಮೂವರು ವಯಸ್ಕ ಗಂಡು ಮಕ್ಕಳು ಕ್ಲೇಮು ಅರ್ಜಿಯನ್ನು ಮುಂದುವರೆಸಿರುತ್ತಾರೆ. ನ್ಯಾಯಾದಿಕರಣವು, ಪ್ರಸ್ತುತ ತೀರ್ಪು ಮತ್ತು ತೀರ್ಪಿನ ಮೂಲಕ ವಾರ್ಷಿಕ ಶೇ.6ರ ಬಡ್ಡಿ ದರಗಳೊಂದಿಗೆ 2,87,000/– ರೂ.ಗಳ ಮೊಬಲಗಿನ ಮೊತ್ತದ ಐತೀರ್ಪು ನೀಡಿರುತ್ತದೆ. ನ್ಯಾಯಾಧಿಕರಣವು ಐತೀರ್ಪು ನೀಡಿದ ಪರಿಹಾರದ ಪರಿಮಾಣದ ಬಗ್ಗೆ ತೃಪ್ತಿಹೊಂದದ ಕ್ಲೇಮುದಾರರು, ಪರಿಹಾರದಲ್ಲಿ ಹೆಚ್ಚಳವನ್ನು ಕೋರಿ ಈ ಅಪೀಲು ಸಲ್ಲಿಸಿರುತ್ತಾರೆ.

3. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿರುತ್ತೇವೆ ಹಾಗೂ ನ್ಯಾಯಾಧಿಕರಣವು ಹೊರಡಿಸಿದ ತೀರ್ಪು ಮತ್ತು ಐತೀರ್ಪುಗಳನ್ನು ಪರಿಶೀಲಿಸಿರುತ್ತೇವೆ.

4. ಕೆಎ–07–2371 ಸಂಖ್ಯೆಯನ್ನು ಹೊಂದಿರುವ ಲಕ್ಷ್ಮೀ ವೆಂಕಟೇಶ್ವರ ಬಸ್‌ನ ಚಾಲಕನು ಅಸಡ್ಡೆಯ ಹಾಗೂ ನಿರ್ಲಕ್ಷ್ಯದ ಚಾಲನೆ ಮಾಡಿದ್ದರಿಂದ 08.09.2004 ರಂದು ರಸ್ತೆ ಅಪಘಾತ ಸಂಭವಿಸಿ ನರಸಿಂಹಪ್ಪನವರು ಮೃತರಾಗಿರುತ್ತಾರೆಂಬುದರಲ್ಲಿ ಹಾಗೂ ಸದರಿ ವಾಹನದ ವಿಮಾದಾರರು ಹೊಣೆಗಾರಿಕೆಯ ಬಗ್ಗೆ ಯಾವುದೇ ವಿವಾದವಿರುವುದಿಲ್ಲ. ಈ ಅಪೀಲಿನಲ್ಲಿ ಪರಿಗಣನೆಗೆ ಸಂಬಂಧಿಸಿದಂತೆ ಉದ್ಭವಿಸಿದ ಎರಡು ಅಂಶಗಳೆಂದರೆ:

1. ನ್ಯಾಯಾಧಿಕರಣವು ಮೃತನ ಆದಾಯದ 1/3 ರಷ್ಟನ್ನು ಆತನ ವೈಯಕ್ತಿಕ ವೆಚ್ಚಗಳಿಗೆ ಸಂಬಂಧಿಸಿದಂತೆ ಕಡಿತ ಮಾಡಿರುವುದು ಮತ್ತು ಕ್ಲೇಮುದಾರರು ಈತನ ವಯಸ್ಕ ಮಕ್ಕಳಾಗಿದ್ದು, ಕ್ಲೇಮು ಅರ್ಜಿಯಲ್ಲಿ ಕುಟುಂಬಕ್ಕೆ ಸಂಬಂಧಿಸಿದಂತೆ ಮೃತನ ಆದಾಯದಲ್ಲಿ 2/3ನ್ನು ವಂತಿಗೆಯಾಗಿ ತೆಗೆದುಕೊಂಡಿರುವುದು ನ್ಯಾಯಯುತವಾದುದೇ ಮತ್ತು ಸರಿಯಾದುದೇ ?

2. ನ್ಯಾಯಾದಿಕರಣವು ಐತೀರ್ಪು ನೀಡಿರುವ ವಾರ್ಷಿಕವಾಗಿ ಶೇ. 6 ರ ಬಡ್ಡಿ ದರದೊಂದಿಗೆ 2,87,000/– ಪರಿಹಾರ ನೀಡಿರುವುದು ನ್ಯಾಯಯುತವಾದುದೆ ಮತ್ತು ಯುಕ್ತವಾದುದೆ ಅಥವಾ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಕ್ಲೇಮು ಮಾಡಬಹುದೆ ?

–ಎಂಬುವುಗಳಾಗಿವೆ.

5. ಕ್ಲೇಮುದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀಮತಿ ಸುಗುಣ ಆರ್. ರೆಡ್ಡಿ ಯವರು, ಮೃತ ವ್ಯಕ್ತಿಯು ಮರಗೆಲಸವನ್ನು ಮಾಡುತ್ತಾ ದಿನಕ್ಕೆ 250/– ರೂ.ಗಳಿಂದ 300/– ರೂಗಳವರೆಗೆ ಗಳಿಸುತ್ತಿದ್ದನೆಂಬುದನ್ನು ಕ್ಲೇಮುದಾರ

1(ಬಿ), ಮೃತ ವ್ಯಕ್ತಿಯ ಎರಡನೇ ಮಗ ಪಿ.ಡಬ್ಲ್ಯೂ.1 ಮತ್ತು ಮೃತ ವ್ಯಕ್ತಿಯ ಗ್ರಾಹಕ ಪಿ.ಡಬ್ಲ್ಯೂ. 2 ಇವರುಗಳಿಂದ ವಿಚಾರಣೆ ವೇಳೆಯಲ್ಲಿ ಮಾಹಿತಿಯನ್ನು ಪಡೆದಿದ್ದು, ಈ ಮಾತಿಗೆ ಪೂರಕವಾಗಿಯೇ ಕ್ಲೇಮುದಾರರು ತಮ್ಮ ಸಾಕ್ಷ್ಯವನ್ನು ನೀಡಿದ್ದಾಗ್ಯೂ, ನ್ಯಾಯಾದಿಕರಣವು ಪ್ರತೀ ತಿಂಗಳು 3,000/– ರೂ.ಗಳನ್ನು ಮೃತ ವ್ಯಕ್ತಿಯು ಗಳಿಸುತ್ತಿದ್ದನೆಂದು ತಪ್ಪಾಗಿ ಲೆಕ್ಕಹಾಕಿ ದೋಷವೆಸಗಿದ್ದು, ತತ್ಪರಿಣಾಮವಾಗಿ, ಅವಲಂಬನೆಯು ನಷ್ಟಕ್ಕೆ ಸಂಬಂಧಿಸಿದಂತೆ ಕೂಡ ನ್ಯಾಯಾಧಿಕರಣ ನೀಡಿರುವ ಪರಿಹಾರವು ಕಡಿಮೆ ಪ್ರಮಾಣದ್ದಾಗಿರುತ್ತದೆ. ಇವರು ಸಾಂಪ್ರದಾಯಿಕ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಐತೀರ್ಪು ನೀಡಿರುವ ಪರಿಹಾರ ತೀರ ಅಲ್ಪ ಪ್ರಮಾಣದ್ದಾಗಿರುತ್ತದೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ. ಆದ್ದರಿಂದ, ಈಕೆ ನ್ಯಾಯಾಧಿಕರಣವು ಐತೀರ್ಪು ನೀಡಿರುವ ಪರಿಹಾರವನ್ನು ಹೆಚ್ಚಿಸುವ ಮೂಲಕ ಅಪೀಲನ್ನು ಅಂಗೀಕರಿಸಬೇಕೆಂದು ಕೋರಿರುತ್ತಾರೆ.

6. ಇದಕ್ಕೆ ವಿರುದ್ಧವಾಗಿ, ಅಪರಾಧಕ್ಕೆ ಗುರಿಯಾಗಿರುವ ವಾಹನದ ವಿಮಾದಾರರಿಗೆ ಸಂಬಂಧಿಸಿದಂತೆ ಹಾಜರಾದ ಮಾನ್ಯ ವಕೀಲರಾದ ಶ್ರೀಮತಿ ಹರಿಣಿ ಶಿವಾನಂದರವರು, ಕ್ಲೇಮು ಅರ್ಜಿಯನ್ನು ಸಲ್ಲಿಸಿದಂಥ ಮೃತರ ಪತ್ನಿಯು ಅರ್ಜಿಯು ಇತ್ಯರ್ಥದಲ್ಲಿರುವಾಗಲೇ ಮೃತರಾಗಿರುತ್ತಾರೆ ಹಾಗೂ ಆಕೆಯ ಮೂವರು ಗಂಡು ಮಕ್ಕಳು ಆಕೆಯ ಕಾನೂನು ಸಮ್ಮತ ವಾರಸುದಾರರಂತೆ ದಾಖಲೆಯನ್ನು ಸಲ್ಲಿಸಿರುತ್ತಾರೆ ಅವರು ಕ್ಲೇಮು ಅರ್ಜಿಯನ್ನು ಮುಂದುವರೆಸಿರುತ್ತಾರೆ. ನ್ಯಾಯಾಧಿಕರಣವು ಮೃತ ವ್ಯಕ್ತಿಯ ಗಂಡುಮಕ್ಕಳು ವಯಸ್ಕರಾಗಿರುವುದನ್ನು ಅವರು ಅವಲಂಬಿತ ಕಾನೂನುಬದ್ಧ ವಾರಸುದಾರರಾಗಿರುವುದಿಲ್ಲವೆಂಬುದನ್ನು ಗಮನಿಸದೆ, ಮೃತನ ಆದಾಯದ ಶೇ.50ರಷ್ಟನ್ನು ಹಾಗೂ ಕುಟುಂಬಕ್ಕೆ ಸಂಬಂಧಿಸಿದಂತೆ ಆತನ ವಂತಿಗೆಯಲ್ಲಿ ಉಳಿದ ಶೇ.50ರಷ್ಟನ್ನು ಕಡಿತಗೊಳಿಸುವುದಕ್ಕೆ ಬದಲಾಗಿ ಕುಟುಂಬಕ್ಕೆ ಸಂಬಂಧಿಸಿದ ಆತನ ವಂತಿಗೆಯ 2/3 ರಷ್ಟನ್ನು ತೆಗೆದುಕೊಂಡಿರುತ್ತದೆ. ಆದಾಗ್ಯೂ, ನ್ಯಾಯಾಧಿಕರಣವು, ಈಗಾಗಲೇ ತೀರ್ಪು ನೀಡಿರುವಂಥ ಪರಿಹಾರದ ಒಟ್ಟು ಮೊಬಲಗು ನ್ಯಾಯಯುತವಾದದ್ದು ಹಾಗೂ ಯುಕ್ತವಾದುದು ಆಗಿರುತ್ತದೆ. ಹೆಚ್ಚಳಕ್ಕೆ ಯಾವುದೇ ಅವಕಾಶವಿರುವುದಿಲ್ಲ. ಆದ್ದರಿಂದ ಈಕೆಯ ಅಪೀಲನ್ನು ವಜಾಗೊಳಿಸಲು ಕೋರಿರುತ್ತಾರೆ.

7. ಕ್ಲೇಮುದಾರರ ಪರ ಹಾಜರಾದ ಮಾನ್ಯ ವಕೀಲರು, ಉತ್ತರಿಸುವಾಗ ಕ್ಲೇಮುದಾರರು ವಿದ್ಯಾವಂತರಲ್ಲ ಅವರು ಯಾವುದೇ ಉದ್ಯೋಗವನ್ನು ಪಡೆದಿರುವುದಿಲ್ಲ ಹಾಗೂ ಅವರು ತಮ್ಮ ತಂದೆಯ ಮರಗೆಲಸದಲ್ಲಿ ನೆರವು ನೀಡುತ್ತಿದ್ದವರೇ ಆಗಿದ್ದರೆಂದು ನಿವೇದಿಸಿಕೊಂಡಿರುತ್ತಾರೆ ಅವರ ಮೃತ ತಂದೆಯವರು ಅವರೊಂದಿಗೆ ವಾಸಿಸುತ್ತಿದ್ದುದರಿಂದ, ಅವರ ದುಡಿಮೆಯ ಹೆಚ್ಚಿನ ಭಾಗ ಅವರ ಕುಟುಂಬಕ್ಕೆ ಸೇರುತ್ತಿತ್ತು. ಅದರಂತೆ ನ್ಯಾಯಾಧಿಕರಣವು ಆತನ ವೈಯಕ್ತಿಕ ವೆಚ್ಚಗಳಿಗೆ ಸಂಬಂಧಿಸಿದಂತೆ ಮೃತನ ಆದಾಯದಲ್ಲಿ 1/3 ರಷ್ಟನ್ನು ಹಾಗೂ ಕುಟುಂಬದ ವೆಚ್ಚಕ್ಕೆ 2/3 ರಷ್ಟು ತೆಗೆದುಕೊಂಡಿರುವುದನ್ನು ಸಮರ್ಥನೀಯವಾಗಿದೆಯೆಂದು ನಿವೇದಿಸಿಕೊಂಡಿದ್ದಾರೆ.

8. ಈತನ ವೈಯಕ್ತಿಕ ವೆಚ್ಚಗಳಿಗೆ ಸಂಬಂಧಿಸಿದಂತೆ ಮೃತನ ಆದಾಯದಿಂದ ಎಷ್ಟನ್ನು ಕಳೆಯಬೇಕು ಹಾಗೂ ಪ್ರತಿ ಸಂದರ್ಭದ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಆಧರಿಸಿ ಅವಲಂಬನೆಯ ನಷ್ಟಕ್ಕೆ ಸಂಬಂಧಿಸಿದಂತೆ ಪರಿಹಾರವನ್ನು ನಿರ್ಧರಿಸುವಾಗ ಕುಟುಂಬಕ್ಕೆ ಸಂಬಂಧಿಸಿದ ವಂತಿಗೆಯಾಗಿ ಎಷ್ಟನ್ನು ಕಳೆಯಬೇಕೆಂಬುದು ಈಗ ಬಿಡಿಸಿಕೊಳ್ಳಬೇಕಾದ ಪ್ರಶ್ನೆಯಾಗಿರುತ್ತದೆ.

9. ಪ್ರಸ್ತುತ ಪ್ರಕರಣದಲ್ಲಿ, ರಸ್ತೆ ಅಪಘಾತದಲ್ಲಿ ತನ್ನ ಪತಿಯು ಮರಣಹೊಂದಿರುವುದಾಗಿ ಪರಿಹಾರ ಕೋರಿ ಮೃತನ ಪತ್ನಿಯು ಆರಂಭದಲ್ಲಿಯೇ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದು, ಅದು ಇತ್ಯರ್ಥದಲ್ಲಿರುವಾಗಲೇ ಆಕೆ ತೀರಿಹೋಗಿರುತ್ತಾಳೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ ಮೂಲ ಕ್ಲೇಮುದಾರಳಾದ ಅಲುವೇಲಮ್ಮ ಮತ್ತು ಮೃತ ನರಸಿಂಹಪ್ಪನ ಮೂವರು ವಯಸ್ಕ ಗಂಡುಮಕ್ಕಳು, ಅವರ ಕಾನೂನುಬದ್ಧ ವಾರಸುದಾರರೆಂದು ದಾಖಲೆಗಳಿಂದ ತಿಳಿದು ಬಂದಿದ್ದು, ಅವರುಗಳೇ ಕ್ಲೇಮು ಅರ್ಜಿಯನ್ನು ಮುಂದುವರೆಸಿರುತ್ತಾರೆ. ನ್ಯಾಯಾಧಿಕರಣವು ಪರಿಹಾರವನ್ನು ಘೋಷಿಸಿದ ದಿನದಂದು ಮೃತನ ಪತ್ನಿ ಕ್ಲೇಮುದಾರಳಾಗಿರಲಿಲ್ಲ ಹಾಗೂ ಮೃತನ ಮೂವರು ಗಂಡುಮಕ್ಕಳು ಕ್ಲೇಮುದಾರರಾಗಿದ್ದರು ದೃಢ ಆರೋಗ್ಯವನ್ನು ಹೊಂದಿದ್ದ ಮೃತನ ಮೂವರು ಗಂಡುಮಕ್ಕಳನ್ನು ಅವರುಗಳ ಜೀವನಕ್ಕಾಗಿ ಸಂಪೂರ್ಣವಾಗಿ ತಮ್ಮ ತಂದೆಯನ್ನೇ

ಅವಲಂಬಿಸಿದ್ದರೆಂದು ಹೇಳಲಾಗುವುದಿಲ್ಲ. ಮೃತನು ಕ್ಲೇಮುದಾರರೊಂದಿಗಲ್ಲದೆ ಪ್ರತ್ಯೇಕವಾಗಿ ವಾಸಿಸುತ್ತಿದ್ದನೆಂಬುದು ಅಸಾಧ್ಯವಾದ ಸಂದರ್ಭವೇ ಆಗಿರುತ್ತದೆ. ಮೃತ ವ್ಯಕ್ತಿಯು ತನ್ನ ಮೂವರು ಮಕ್ಕಳು ಹಾಗೂ ಅವರುಗಳ ಕುಟುಂಬದೊಂದಿಗೆ ವಾಸಿಸುತ್ತಿರುವಾಗ, ತನ್ನ ಮಕ್ಕಳ ಕುಟುಂಬಕ್ಕೆ ತನ್ನ ದುಡಿಮೆಯ ಪಾಲಿನಲ್ಲಿ ಏನನ್ನು ಕೊಡದೆ ತಾನೇ ಇಟ್ಟುಕೊಳ್ಳುತ್ತಿದ್ದನು ಎಂದು ಹೇಳಲಾಗುವುದಿಲ್ಲ. ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳ ಹಿನ್ನಲೆಯಲ್ಲಿ ಹಾಗೂ ವರದಿಯಾದ ***ರಾಷ್ಟ್ರೀಯ ವಿಮಾ ಕಂಪನಿ ಲಿಮಿಟೆಡ್ –ವಿರುದ್ಧ– ಮೇಘಜಿ ನಾರನ್ ಸಾರೊತ್ತಿಯಾ ಮತ್ತು ಇತರರು***[1], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಉದಾಹರಿಸಿ, ನ್ಯಾಯಾಧಿಕರಣವು ಆತನ ವೈಯಕ್ತಿಕ ಖರ್ಚಿಗಾಗಿ 1/3ರಷ್ಟನ್ನು, ಕುಟುಂಬದ ಖರ್ಚಿಗಾಗಿ 2/3ರಷ್ಟನ್ನು ನೀಡಿರುತ್ತಾನೆಂದು ಲೆಕ್ಕ ಹಾಕಿರುವುದಕ್ಕೆ ಪ್ರತಿಯಾಗಿ ಮೃತನ ಆದಾಯದಲ್ಲಿ ಆತನ ವೈಯಕ್ತಿಕ ವೆಚ್ಚಗಳಿಗೆ ಸಂಬಂಧಿಸಿದಂತೆ ಶೇ.50ರಷ್ಟನ್ನು ಹಾಗೂ ಆತನ ಮೂವರು ವಯಸ್ಕ ಮಕ್ಕಳ ಕುಟುಂಬಕ್ಕೆ ಪ್ರತಿಯಾಗಿ ಶೇ.50ರಷ್ಟನ್ನು ಈತನ ಆದಾಯದಿಂದ ನೀಡಿರುತ್ತಾನೆಂದು ಹೇಳಿರುವುದು ಸರಿಯಾದ ಹಾಗೂ ನ್ಯಾಯಯುತವಾದ ತೀರ್ಪೇ ಆಗಿರುತ್ತದೆ. ನ್ಯಾಯಾಧಿಕರಣವು, ಮರಣೋತ್ತರ ಪರೀಕ್ಷಾ ವರದಿಯ ಪ್ರಕಾರ ಮೃತನಿಗೆ ಸುಮಾರು 50 ವರ್ಷವಾಗಿತ್ತೆಂದೂ, 11 ಕ್ಕೆ ಬದಲಾಗಿ ಆತನ ವಯೋ ಗುಂಪಿಗೆ ಅನ್ವಯವಾಗುವ 13 ರ ಗುಣಕವನ್ನು ಅನ್ವಯಿಸಬೇಕೆಂದು ಅಭಿಪ್ರಾಯಪಟ್ಟಿರುತ್ತದೆ.

10. ಕ್ಲೇಮುದಾರ ಸಂ. 1(ಬಿ) ಮೃತನ ಎರಡನೇ ಮಗ ಪಿ.ಡಬ್ಲೂ 1 ಇವನು ತನ್ನ ತಂದೆ ಮರಗೆಲಸ ಮಾಡುತ್ತಿದ್ದು, ದಿನಕ್ಕೆ 250/– ರಿಂದ 300/– ರೂ.ಗಳನ್ನು ಸಂಪಾದಿಸುತ್ತಿದ್ದನೆಂದು ತನ್ನ ಸಾಕ್ಷ್ಯದಲ್ಲಿ ತಿಳಿಸಿರುತ್ತಾನೆ. ಪಿಡಬ್ಲ್ಯೂ–3, ಮೃತ ವ್ಯಕ್ತಿಯು ಊಟದ ಮೇಜು ಹಾಗೂ ಮತ್ತಿತರ ಮರಗೆಲಸ ಮಾಡಿ ದಿನಕ್ಕೆ 250/– ರಿಂದ 300/– ರೂಗಳ ವರೆಗೆ ಸಂಪಾದಿಸುತ್ತಿದ್ದನೆಂದು ತಿಳಿಸಿ ಮೇಲಿನ ಸಾಕ್ಷ್ಯವನ್ನು ಸಮರ್ಥಿಸಿರುತ್ತಾನೆ ಪಿಡಬ್ಲ್ಯೂ.1 ಮತ್ತು ಪಿಡಬ್ಲ್ಯೂ.3 ಮೌಖಿಕ ಸಾಕ್ಷ್ಯವನ್ನು ಹೊರತುಪಡಿಸಿದಂತೆ ಯಾವುದೇ ದಸ್ತಾವೇಜು ಸಾಕ್ಷ್ಯವು

1. 2009 ಎಸಿಜೆ 1441

ದೊರೆತಿರುವುದಿಲ್ಲ. ಆದ್ದರಿಂದ ಅಪಘಾತವಾದ 2004 ರ ಹೊತ್ತಿಗೆ ಮೃತನಿಗೆ 50 ವರ್ಷಗಳಾಗಿರುತ್ತದೆಂದು ಪರಿಗಣಿಸಿ, ಮರಗೆಲಸದ ಈತನ ಉದ್ಯೋಗದಿಂದ ಪ್ರತೀ ತಿಂಗಳು 4,500/– ರೂ.ಗಳಷ್ಟು ಗಳಿಸುತ್ತಿದ್ದರೆ ಹೇಗೋ ಹಾಗೆ ಲೆಕ್ಕ ಹಾಕಲಾಗಿರುತ್ತದೆ. ಹಾಗಾದಲ್ಲಿ, ಅವಲಂಬನೆಯ ನಷ್ಟವನ್ನು 3,51,000/– (ರೂ.4,800/– X 12 X 50/100 X 13)ಕ್ಕೆ ಲೆಕ್ಕ ಹಾಕಬೇಕಾಗುತ್ತದೆ. ಈ ಮೊಬಲಗನ್ನು ನ್ಯಾಯಾಧಿಕರಣವು ಐತೀರ್ಪು ನೀಡಿರುವ 2,64,000/– ರೂ.ಗಳಿಗೆ ಪ್ರತಿಯಾಗಿ ನೀಡಬೇಕಾಗಿರುತ್ತದೆ.

11. ಇದರೊಂದಿಗೆ, ಪ್ರೀತಿ ಹಾಗೂ ವಿಶ್ವಾಸದ ನಷ್ಟ, ಸಂಪದ ನಷ್ಟ ಹಾಗೂ ಸಾರಿಗೆ ಮತ್ತು ಶವಸಂಸ್ಕಾರದ ವೆಚ್ಚಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ಶೀರ್ಷಿಕೆಗಳಡಿಯಲ್ಲಿ ನ್ಯಾಯಾಧಿಕರಣವು ಐತೀರ್ಪು ನೀಡಿದ 23,000/– ರೂ.ಗಳಿಗೆ ಬದಲಾಗಿ 50,000/– ರೂ.ಗಳನ್ನು ನೀಡಲಾಗಿರುತ್ತದೆ.

12. ಹಾಗಾಗಿ, ಕ್ಲೇಮುದಾರರು ಈ ಮುಂದಿನ ಪರಿಹಾರಗಳಿಗೆ ಸಂಬಂಧಿಸಿದಂತೆ ಹಕ್ಕುಳ್ಳವರಾಗಿರುತ್ತಾರೆ:–

| ವಿವರಗಳು | ರೂ. |
|---|---|
| ಅವಲಂಬನೆಯ ನಷ್ಟ (ರೂ.4,500 X 12 X 50/100 X 13) | 3,51,000 |
| ಸಾಂಪ್ರದಾಯಿಕ ಶೀರ್ಷಿಕೆಗಳು | 50,000 |
| ಒಟ್ಟು | 4,01,000 |
| **ಕಡಿತ**: ನ್ಯಾಯಾಧಿಕರಣವು ಐತೀರ್ಪು ನೀಡಿದ್ದ ಪರಿಹಾರ | 2,87,000 |
| ಬಾಕಿ | 1,14,000 |

13. ತದನುಸಾರವಾಗಿ, ಅಪೀಲನ್ನು ಭಾಗಶಃ ಅಂಗೀಕರಿಸಲಾಗಿರುತ್ತದೆ. ನ್ಯಾಯಾಧಿಕರಣವು ಹೊರಡಿಸಿರುವ ತೀರ್ಪು ಹಾಗೂ ತೀರ್ಪನ್ನು ಈ ಮೇಲೆ

ಹೇಳಲಾದ ಮಟ್ಟಿಗೆ ಮಾರ್ಪಾಡುಗೊಳಿಸಲಾಗಿರುತ್ತದೆ. ಕ್ಲೇಮುದಾರರು, ಅಪೀಲು ಸಲ್ಲಿಸುವಲ್ಲಿ ವಿಳಂಬವಾದ 304 ದಿನಗಳನ್ನು ಹೊರತುಪಡಿಸಿ, ಕ್ಲೇಮು ಅರ್ಜಿಯನ್ನು ಸಲ್ಲಿಸಿದ ದಿನದಿಂದ ಹಣ ಸಂದಾಯ ಮಾಡುವ ದಿನದ ವರೆಗೆ ವಾರ್ಷಿಕ ಶೇ.6ರ ಬಡ್ಡಿ ದರದೊಂದಿಗೆ ರೂ 1,14,000/– ರೂ.ಗಳ ಹೆಚ್ಚುವರಿ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

14. ವಿಮಾ ಕಂಪನಿಗೆ, ಈ ತೀರ್ಪಿನ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ವಿಳಂಬಿತ ಅವಧಿಯನ್ನು ಹೊರತುಪಡಿಸಿ ಬಡ್ಡಿಯೊಂದಿಗೆ ಹೆಚ್ಚುವರಿ ಪರಿಹಾರದ ಮೊಬಲಗನ್ನು ಠೇವಣಿ ಮಾಡಲು ನಿರ್ದೇಶಿಸಿದೆ.

ಇಡೀ ಮೊಬಲಗನ್ನು ಸಮಾನ ಪ್ರಮಾಣಾನುಸಾರವಾಗಿ ಕ್ಲೇಮುದಾರರ ಹೆಸರಿನಲ್ಲಿ ಬಿಡುಗಡೆ ಮಾಡತಕ್ಕದ್ದು ವೆಚ್ಚಗಳಿಗೆ ಯಾವುದೇ ಆದೇಶವಿರುವುದಿಲ್ಲ.